'ದ ವೆಜಿಟೇರಿಯನ್' ಕಾದಂಬರಿಯ ನಾಯಕಿ ಯಾಂಗ್ ಹೇಗೆ ದೈಹಿಕ ಹಿಂಸೆ ಮತ್ತು ರಕ್ತಪಾತದ ಕನಸುಗಳು ಬೀಳತೊಡಗುತ್ತವೆ. ಇದರಿಂದ ವಿಚಿತ್ರ ತಲ್ಲಣಕ್ಕೊಳಗಾಗುವ ಅವಳು ಯಾವುದೇ ಜೀವಕ್ಕೂ ನೋವುಂಟುಮಾಡಬಾರದೆಂದು ನಿರ್ಧರಿಸಿ ಸಸ್ಯಾಹಾರಿಯಾಗುತ್ತಾಳೆ. ಅವಳ ಪ್ರಕಾರ ಮಾಂಸಾಹಾರವು ಮನುಷ್ಯ ಹಿಂಸೆ ಮತ್ತು ವಿನಾಶದ ಪ್ರತೀಕ. ಸಸ್ಯಾಹಾರದ ಬಳಕೆಯೇ ಅತ್ಯಂತ ಕಡಿಮೆಯಿರುವ ಕೊರಿಯಾದ ಪಿತೃಪ್ರಧಾನ ವ್ಯವಸ್ಥೆಯ ಕುಟುಂಬದಲ್ಲಿ ಎಲ್ಲರೂ ಯಾಂಗ್ ಹೇಯ ನಿಲುವನ್ನು ಖಂಡಿಸುತ್ತಾರೆ. ತನ್ನ ಮಾತನ್ನು ಕೇಳದ ಮಗಳಿಗೆ ಯಾಂಗ್‌ಳ ತಂದೆ ಬಲವಂತವಾಗಿ ಮಾಂಸವನ್ನು ಬಾಯೊಳಗೆ ತುರುಕಿ ತಿನ್ನಿಸುವ ಪ್ರಯತ್ನ ಮಾಡುತ್ತಾನೆ. ಅವಳು ಇದನ್ನು ಪ್ರತಿಭಟಿಸಿದಾಗ ಹೊಡೆದು ಹಿಂಸಿಸುತ್ತಾನೆ. ಹೆಂಡತಿಯ 'ಹುಚ್ಚಾಟ'ಗಳನ್ನು ಸಹಿಸಲಾಗದ ಯಾಂಗ್‌ಳ ಗಂಡ ವಿಚ್ಛೇದನ ನೀಡಿ ಬೇರೆಯಾಗುತ್ತಾನೆ. ಹಿಂಸೆಯನ್ನು ಕುರಿತ ಚಿಂತನೆಯು ಯಾಂಗ್ ಒಳಗೆ ಬೆಳೆಯುತ್ತ ಹೋಗಿ ಕೊನೆಗೆ ಅವಳು ಇಡೀ ಪ್ರಪಂಚವನ್ನೇ ಹಿಂಸೆಯ ಪ್ರತೀಕವಾಗಿ ಭಾವಿಸತೊಡಗುತ್ತಾಳೆ; ಕ್ರಮೇಣ ತನ್ನನ್ನು ತಾನು ಒಂದು ಗಿಡವಾಗಿ ಭಾವಿಸಿಕೊಳ್ಳುತ್ತ, ಮಾತನಾಡುವುದನ್ನು ಕಡಿಮೆ ಮಾಡುತ್ತಾಳೆ; ಒಂದು ದಿನ ಊಟ ತಿನ್ನುವುದನ್ನೇ ನಿಲ್ಲಿಸಿ, ಗಿಡಮರಗಳ ಹಾಗೆ ಮೈಯನ್ನು ಬಿಸಿಲಿಗೊಡ್ಡಿಕೊಂಡು, ನೀರನ್ನು ಮಾತ್ರ ಸೇವಿಸುತ್ತ ಇದ್ದುಬಿಡುತ್ತಾಳೆ. ಇದೆಲ್ಲದರಿಂದ ಸಂಪೂರ್ಣ ನಿತ್ರಾಣಳಾಗಿ, ತನ್ನನ್ನು ತಾನು 'ಮುಕ್ತ'ವಾಗಿಸಿಕೊಳ್ಳಲು ಹೊರಟ ಕ್ರಿಯೆಯೇ ಆಕೆಗೆ ಪ್ರಾಣಾಂತಕವಾಗುತ್ತದೆ.

'ಮನುಷ್ಯರೆಲ್ಲ ಗಿಡವಾಗಬೇಕಿತ್ತು' ಎಂಬುದು ಕೊರಿಯಾದ ಶ್ರೇಷ್ಠ ಆಧುನಿಕ ಕವಿ ಯಿ ಸಾಂಗ್ ಅವರ ಕವಿತೆಯ ಒಂದು ಸಾಲು. ಜಪಾನ್ ದೇಶವು ಕೊರಿಯಾವನ್ನು ವಶಪಡಿಸಿಕೊಂಡಾಗ ಅಧಿಕಾರರೂಢ ಶಕ್ತಿಗಳು ಸಾಂಗ್ರ ಅನೇಕ ಬರಹಗಳ ಹಾಗೇ ಈ ಕವಿತೆಯನ್ನೂ ನಿಷೇಧಿಸಿತ್ತು. ಹಾನ್ ಕಾಂಗ್‌ರು ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾಗ ಗಮನಕ್ಕೆ ಬಂದ ಈ ಕವಿತೆಯು ಅವರನ್ನು ಇನ್ನಿಲ್ಲದಂತೆ ಕಾಡಿದ ಫಲವಾಗಿ ಹಾನ್ ಕಾಂಗ್ 'ಎ ಫ್ರೂಟ್ ಆಫ್ ಮೈ ವುಮನ್' ಎಂಬ ಸಣ್ಣಕಥೆಯನ್ನು ಬರೆದರು. ಈ ಕಥೆಯಲ್ಲಿ ಹೆಣ್ಣೊಬ್ಬಳು ದೈಹಿಕವಾಗಿ ಅಕ್ಷರಶಃ ಗಿಡವಾಗಿ ಮಾರ್ಪಾಡಾಗುತ್ತಾಳೆ. ಆಕೆಯ ಗಂಡ ಅವಳನ್ನು ಹೂವಿನ ಕುಂಡದೊಳಗೆ ಹಾಕಿ, ನೀರೂಡಿಸುತ್ತ ಪಾಲನೆ ಮಾಡುತ್ತಾನೆ. ದಿನ ಕಳೆದಂತೆ ಗಿಡವು ಒಣಗುತ್ತ ಬರುತ್ತದೆ. ತನ್ನ ಹೆಂಡತಿ ಮುಂದಿನ ವಸಂತಕಾಲದಲ್ಲಿ ಮತ್ತೆ ಅರಳಬಹುದೇನೋ ಎಂಬ ಗಂಡನ ಎದುರುನೋಡುವಿಕೆಯಲ್ಲಿ ಕಥೆ ಮುಕ್ತಾಯವಾಗುತ್ತದೆ. 'ಕಥೆಯನ್ನು ಬರೆದಾದ ನಂತರ ಇದು ಪೂರ್ಣವಾಗಿಲ್ಲ ಎಂದು ತೀವ್ರವಾಗಿ ಅನ್ನಿಸಿದ್ದರಿಂದ ಮತ್ತು ಆ ಕಥೆಯ ಮುಂದುವರಿಕೆಯಾಗಿ ಮತ್ತೊಂದು ಕಥೆ ಹೇಳಬೇಕೆಂಬ ಹಂಬಲ ಉಂಟಾದದ್ದರಿಂದ ಮತ್ತೆ ಬರೆಯಲು ತೊಡಗಿದೆ. ಮನುಷ್ಯನ ಹಿಂಸಾ ಪ್ರವೃತ್ತಿಯ ಬಗೆಗಿನ ಚಿಂತನೆಯಲ್ಲಿ ನನ್ನ ಮನಸ್ಸು ತೊಡಗಿರುವುದರ ಫಲವಾಗಿ 'ದ ವೆಜಿಟೇರಿಯನ್' ಕೃತಿ ರೂಪುಗೊಂಡಿತು' ಎನ್ನುತ್ತಾರೆ ಹಾನ್ ಕಾಂಗ್. ಇದರ ಜೊತೆಗೆ, ಮನುಷ್ಯ ತನ್ನ ಮುಗ್ಧತೆಯನ್ನು ಉಳಿಸಿಕೊಂಡು ಬದುಕುವುದು ಸಾಧ್ಯವೋ ಇಲ್ಲವೋ ಎಂಬ ಪ್ರಶ್ನೆಯು ಅವರನ್ನು ದೀರ್ಘಕಾಲ ಕಾಡಿರುವ ಹಾಗೆ ಕಾಣುತ್ತದೆ.

'ದ ವೆಜಿಟೇರಿಯನ್' ಕೃತಿಯ ಕಥಾಹಂದರವು ಕಾಫ್ಕನ 'ಮೆಟಮಾರ್ಫಸಿಸ್'ನಿಂದ ಪ್ರೇರಿತವಾಗಿರುವಂತೆ ಕಾಣುವುದರಿಂದ ಹಾನ್ ಕಾಂಗ್‌ರನ್ನು 'ಕೊರಿಯಾದ ಕಾಫ್ಕ' ಎಂದು ಕರೆಯುತ್ತಾರೆ. ಕಾಫ್ಕ ತನಗೆ ನೆಚ್ಚಿನ ಲೇಖಕನೆಂದು ಒಪ್ಪಿಕೊಳ್ಳುವ ಕಾಂಗ್, ತನ್ನ ಕೃತಿಯು ಕಾಫ್ಕನ ನೇರ ಪ್ರಭಾವ ಎಂಬ ಅನಿಸಿಕೆಯನ್ನು ಅಲ್ಲಗಳೆಯುತ್ತಾರೆ. ಮನುಷ್ಯ ಮನಸ್ಸಿನ